# 21st Meeting of SCO Council of Heads of State in Dushanbe, Tajikistan

September 15, 2021

---

## ತಜಕಿಸ್ತಾನದ ದುಶಾನ್‌ಬೆಯಲ್ಲಿ ಶಾಂಘೈ ಸಹಕಾರ ಸಂಘಟನೆಯ ರಾಜ್ಯ ಮುಖ್ಯಸ್ಥರ ಮಂಡಳಿಯ 21 ನೇ ಸಭೆ

ಸೆಪ್ಟೆಂಬರ್ 15, 2021

1. ಶಾಂಘೈ ಸಹಕಾರ ಸಂಘಟನೆಯ ರಾಜ್ಯ ಮುಖ್ಯಸ್ಥರ ಮಂಡಳಿಯ 21 ನೇ ಸಭೆ ದುಶನ್‌ಬೆಯಲ್ಲಿ 17 ಸೆಪ್ಟೆಂಬರ್ 2021 ರಂದು ಹೈಬ್ರಿಡ್ ಮಾದರಿಯಲ್ಲಿ ನಡೆಯಲಿದೆ. ಈ ಸಭೆಯ ಅಧ್ಯಕ್ಷತೆಯನ್ನು ತಜಕಿಸ್ತಾನದ ಅಧ್ಯಕ್ಷರಾದ ಮಾನ್ಯ ಎಮೋಮಾಲಿ ರಹಮಾನ್ ವಹಿಸಲಿದ್ದಾರೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಭಾರತೀಯ ನಿಯೋಗವನ್ನು ಮುನ್ನಡೆಸಲಿದ್ದಾರೆ ಮತ್ತು ವಿಡಿಯೋ-ಲಿಂಕ್ ಮೂಲಕ ಶೃಂಗಸಭೆಯ ಪೂರ್ಣ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಭಾರತವನ್ನು ದುಶಾನ್‌ಬೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್. ಜೈಶಂಕರ್ ರವರು ಪ್ರತಿನಿಧಿಸುತ್ತಾರೆ.

2. ಎಸ್‌ಸಿಒ ಶೃಂಗಸಭೆಯಲ್ಲಿ ಎಸ್‌ಸಿಒ ಸದಸ್ಯ ರಾಷ್ಟ್ರಗಳು, ವೀಕ್ಷಕ ರಾಷ್ಟ್ರಗಳು, ಎಸ್‌ಸಿಒನ ಪ್ರಧಾನ ಕಾರ್ಯದರ್ಶಿ, ಎಸ್‌ಸಿಒ ಪ್ರಾದೇಶಿಕ ಭಯೋತ್ಪಾದನಾ ವಿರೋಧಿ ರಚನೆಯ (ಆರ್‌ಎಟಿಎಸ್) ಕಾರ್ಯನಿರ್ವಾಹಕ ನಿರ್ದೇಶಕರು, ತುರ್ಕಮೆನಿಸ್ತಾನದ ಅಧ್ಯಕ್ಷರು ಮತ್ತು ಇತರ ಆಹ್ವಾನಿತ ಅತಿಥಿಗಳು ಭಾಗವಹಿಸಲಿದ್ದಾರೆ.

3. ಇದು ಹೈಬ್ರಿಡ್ ಮಾದರಿಯಲ್ಲಿ ನಡೆಯುತ್ತಿರುವ ಮೊದಲ ಎಸ್‌ಸಿಒ ಶೃಂಗಸಭೆ ಮತ್ತು ಭಾರತವು ಎಸ್‌ಸಿಒನ ಪೂರ್ಣ ಪ್ರಮಾಣದ ಸದಸ್ಯರಾಗಿ ಭಾಗವಹಿಸುವ ನಾಲ್ಕನೇ ಶೃಂಗಸಭೆಯಾಗಿದೆ. ಸಂಸ್ಥೆಯು ಈ ವರ್ಷ ತನ್ನ 20 ನೇ ವಾರ್ಷಿಕೋತ್ಸವವನ್ನು ಆಚರಿಸುವುದರಿಂದ ಈ ಶೃಂಗಸಭೆಯು ಮಹತ್ವವನ್ನು ಪಡೆದುಕೊಂಡಿದೆ. ಶೃಂಗಸಭೆಯಲ್ಲಿ, ನಾಯಕರು ಕಳೆದ ಎರಡು ದಶಕಗಳಲ್ಲಿ ಸಂಸ್ಥೆಯ ಚಟುವಟಿಕೆಗಳನ್ನು ಪರಿಶೀಲಿಸುತ್ತಾರೆ ಮತ್ತು ಭವಿಷ್ಯದ ಪರಿಸ್ಥಿತಿ ಮತ್ತು ಸಹಕಾರದ ನಿರೀಕ್ಷೆಗಳನ್ನು ಚರ್ಚಿಸುವ ನಿರೀಕ್ಷೆಯಿದೆ. ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಪ್ರಾಮುಖ್ಯತೆಯ ಸಮಕಾಲೀನ ಸಮಸ್ಯೆಗಳನ್ನೂ ಚರ್ಚಿಸುವ ನಿರೀಕ್ಷೆಯಿದೆ.

**ನವ ದೆಹಲಿ**
**ಸೆಪ್ಟೆಂಬರ್ 15, 2021**

DISCLAIMER: This is an approximate translation. The original is available in English on MEA's website and may be referred to as the official press release.